ಸಿ ಸಿ ನಂ. 1035 /2017

ಸಾಕ್ಷಿಗೆ ದಿನಾಂಕ 25-11-2022 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 4

| | | |
|---|---|---|
| ಹೆಸರು | : | ವೀರಬಸಪ್ಪ |
| ತಂದೆ ಹೆಸರು | : | ಬಸಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಏಣಗಿ ಬಸಾಪುರ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-1 ನನ್ನ ಹೆಂಡತಿ, ಚಾಸಾ-5 ಮತ್ತು 6 ನನ್ನ ಮಕ್ಕಳು, 1 ನೇ ಆರೋಪಿ ನನ್ನ ಅಣ್ಣ, 2 ರಿಂದ 4 ನೇ ಆರೋಪಿತರು ನನ್ನ ಅಣ್ಣನ ಮಕ್ಕಳು, 5 ನೇ ಆರೋಪಿ ನನ್ನ ಅತ್ತಿಗೆ, 6 ನೇ ಆರೋಪಿ ನನ್ನ ದೊಡ್ಡಪ್ಪನ ಮಗ.

ಏಣಗಿ ಬಸಾಪುರದಲ್ಲಿ ನನ್ನ ತಂದೆಯಾದ ಬಸಪ್ಪರವರ ಹೆಸರಿನಲ್ಲಿ ಒಟ್ಟು 11 ಎಕರೆ 65 ಸೆಂಟ್ಸ ಜಮೀನು ಇರುತ್ತದೆ. ಅದರಲ್ಲಿ 6 ಎಕರೆ 22 ಸೆಂಟ್ಸ ಸ್ವತ್ತು 5 ನೇ ಆರೋಪಿತಳ ಹೆಸರಿನಲ್ಲಿರುತ್ತದೆ. 2 ಎಕರೆ 70 ಸೆಂಟ್ಸ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಉಳಿದ 2 ಎಕರೆ 71 ಸೆಂಟ್ಸ ಸ್ವತ್ತನ್ನು 6 ನೇ ಆರೋಪಿಯು ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ.

ನನ್ನ ತಂದೆ ಬಸಪ್ಪನಿಗೆ ಇಬ್ಬರು ಮಕ್ಕಳು ಅವರೆಂದರೆ ನಾನು ಮತ್ತು 1 ನೇ ಆರೋಪಿ. ನನ್ನ ತಂದೆ ಮರಣಾ ನಂತರ ನಮ್ಮ ಭೂಮಿಯನ್ನು ಮಾಡಿಕೊಡುವಂತೆ ನಾನು 6 ನೇ ಆರೋಪಿ ಮತ್ತು ನನ್ನ ಅಣ್ಣ 1 ನೇ ಆರೋಪಿತನಿಗೆ ಕೇಳಿದ್ದು 6 ನೇ ಆರೋಪಿಯು ನನ್ನ ಹೆಸರಿಗೆ ಭೂಮಿಯನ್ನು ಬರೆದುಕೊಟ್ಟಿರುತ್ತಾರೆ. ನನ್ನ ಅಣ್ಣನಾದ 1 ನೇ ಆರೋಪಿತನಿಗೆ ಉಳಿದ ಜಮೀನನ್ನು ಮಾಡಿಕೊಡುವಂತೆ ಕೇಳಿದ್ದು ದಿನಾಂಕಃ 20-03-2017 ರಂದು 5 ಗಂಟೆ ಸುಮಾರಿಗೆ ಕೇಳಿದ್ದು ನಾನು ಮನೆಗೆ ಬಂದಿರುತ್ತೇನೆ. ಆ ನಂತರ ನಮ್ಮ ಮನೆಯ ಹತ್ತಿರ ಚಾಸಾ-1 ನನ್ನ ಹೆಂಡತಿ 1 ನೇ ಆರೋಪಿತನನ್ನು ಸದರಿ ಜಮೀನನ್ನು ನನ್ನ ಹೆಸರಿಗೆ

ಮಾಡಿಕೊಡುವಂತೆ ಕೇಳಿದ್ದು 1 ರಿಂದ 5 ನೇ ಆರೋಪಿತರು ನಮಗೆ ಒಂದು ಸೆಂಟ್ಸ ಭೂಮಿಯನ್ನು ಕೊಡುವುದಿಲ್ಲವೆಂದು ಹೇಳಿ ನಮ್ಮ ಬಳಿ ಜಗಳವಾಡಿದರು.

2 ನೇ ಆರೋಪಿಯು ನನ್ನ ಮಗನಾದ ಚಾಸಾ-5 ರವರಿಗೆ ಬಡಿಗೆಯಿಂದ ಬಲಗೈ ಮೊಣಕೈಗೆ ಹೊಡೆದರು. ಆ ನಂತರ 3 ನೇ ಆರೋಪಿಯು ನನ್ನ ಮಗನಿಗೆ ಬಲಗೈಯಿಂದ ಮೂಗಿಗೆ ಗುದ್ದಿದನು, ರಕ್ತ ಬಂದಿರುತ್ತದೆ ಆ ನಂತರ 1 ನೇ ಆರೋಪಿಯು ನನ್ನ ಶರ್ಟ ಪಟ್ಟಿಯನ್ನು ಹಿಡಿದುಕೊಂಡು ಹಣೆಗೆ ಹೊಡೆದನು. ಆ ನಂತರ 5 ನೇ ಆರೋಪಿತಳು ಚಾಸಾ-1 ನನ್ನ ಹೆಂಡತಿಯ ಕೂದಲನ್ನು ಹಿಡಿದು ಹೊಡೆದಿದ್ದು, ಆ ನಂತರ ಚಾಸಾ-2, 3, 8, 9 ರವರು ಜಗಳವನ್ನು ಬಿಡಿಸಿದರು.

ಆ ನಂತರ ನಾವು ನನ್ನ ಮಗ ಚಾಸಾ-5 ರವರನ್ನು ಕರೆದುಕೊಂಡು ಹಂಪಸಾಗರ ಆಸ್ಪತ್ರೆಗೆ ಹೋದೆವು. ಆ ನಂತರ ಅಂಬ್ಯುಲೆನ್ಸನಲ್ಲಿ ಹೊಸಪೇಟೆ ಆಸ್ಪತ್ರೆಗೆ ಹೋಗಿದ್ದು ತದನಂತರ ತಂಬ್ರಹಳ್ಳಿ ಪೊಲೀಸ್ ಠಾಣೆಯಲ್ಲಿ ಚಾಸಾ-1 ನನ್ನ ಹೆಂಡತಿ ಆರೋಪಿತರ ವಿರುದ್ಧ ದೂರನ್ನು ಕೊಟ್ಟರು. 6 ನೇ ಆರೋಪಿಯು ಘಟನಾ ಸ್ಥಳದಲ್ಲಿರಲಿಲ್ಲ ಮತ್ತು ಆತನು ನಮ್ಮ ಜೊತೆ ಜಗಳ ಮಾಡಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರ ಸಮಕ್ಷಮ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು, ನ್ಯಾಯಾಲಯದ ಸಮಕ್ಷಮದಲ್ಲಿರುವ ಮು ಮಾ-1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿದ್ದು ಪಾಟೀಸವಾಲಿಗೆ ಅನುಮತಿಯನ್ನು ಕೇಳಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

6 ನೇ ಆರೋಪಿ ಸದರಿ ಭೂಮಿಯು ಆತನಿಗೆ ಸಂಬಂಧಪಟ್ಟಿದ್ದು ಎಂದು ಬೆಳೆ ಕಟಾವು ಮಾಡುವುದನ್ನು ತಡೆದಿರುತ್ತಾರೆಂದರೆ ಸರಿ. ನಾನು ಮತ್ತು ನನ್ನ ಹೆಂಡತಿ ಸದರಿ ಆಸ್ತಿಯನ್ನು

ಕೇಳಿದಾಗಿ 1 ರಿಂದ 6 ನೇ ಆರೋಪಿತರು ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಜಗಳವನ್ನು ಬಿಡಿಸಲು ಚಾಸಾ-7 ರವರು ಬಂದಿದ್ದರು ಎಂದರೆ ಸರಿ. ಸದರಿ ಆರೋಪಿತರು ನಮಗೆ ಜೀವಬೆದರಿಕೆ ಹಾಕಿರುತ್ತಾರೆಂದರೆ ಸರಿ. ನನ್ನ ಹೆಂಡತಿಗೆ ಹೊಡೆಯುವಾಗ 5 ನೇ ಆರೋಪಿತಳು ತಾಳಿ ಸರವನ್ನು ಕಿತ್ತುಹಾಕಿರುತ್ತಾರೆಂದರೆ ಸರಿ.

ಪಾಟೀ ಸವಾಲು. 1 ರಿಂದ 5 ನೇ ಆರೋಪಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ-

ನನಗೆ ಓದಲು ಬರೆಯಲು ಬರುತ್ತದೆಂದರೆ ಸರಿ. ನಿಪಿ-5 ರ ನನ್ನ ಹೇಳಿಕೆಯಲ್ಲಿ ಬರೆದಿರುವ ಬಗ್ಗೆ ನಾನು ಸಂಪೂರ್ಣವಾಗಿ ಓದುತ್ತೇನೆಂದರೆ ಸರಿ. ನಾನು 1 ರಿಂದ 6 ನೇ ಆರೋಪಿತರ ವಿರುದ್ಧ ಸಿವಿಲ್ ದಾವೆಯನ್ನು ದಾಖಲುಪಡಿಸಿರುವುದಿಲ್ಲ. ನನ್ನ ತಂದೆ ತಾಯಿ ಆಸ್ತಿಯಲ್ಲಿ ನನಗೂ ಭಾಗ ಇದೆ ಎಂದು ನಾನು ಆರೋಪಿತರ ವಿರುದ್ಧ ಸಿವಿಲ್ ದಾವೆ ಸಲ್ಲಿಸಿರುತ್ತೇನೆಂದರೆ ಸರಿ. ನಮ್ಮ ಕುಟುಂಬದ ಒಟ್ಟು 11 ಎಕರೆ 65 ಸೆಂಟ್ಸ ಸ್ವತ್ತು ಇರುತ್ತದೆ. ಮೂಲತಃ ಸದರಿ ಆಸ್ತಿಯು ನನ್ನ ತಂದೆಯ ತಂದೆ ಹೆಸರಿನಲ್ಲಿತ್ತು. ನಮ್ಮ ತಂದೆಗೆ ನಾನು ಮತ್ತು 1 ನೇ ಆರೋಪಿ ಇಬ್ಬರೇ ಮಕ್ಕಳು ಎಂದರೆ ಸರಿ. ನನ್ನ ಮತ್ತು ನನ್ನ ಅಣ್ಣನ ನಡುವೆ ಯಾವುದೇ ಪಾಲುವಿಭಾಗವಾಗಿರುವುದಿಲ್ಲ. ಪ್ರಸ್ತುತ ಸದರಿ ಆಸ್ತಿಯಲ್ಲಿ 2 ಎಕರೆ 71 ಸೆಂಟ್ಸ ನನ್ನ ಹೆಸರಿನಲ್ಲಿರುತ್ತದೆ. 2 ಎಕರೆ 72 ಸೆಂಟ್ಸ ನನ್ನ ತಂದೆ ಹೆಸರಿನಲ್ಲಿರುತ್ತದೆ ಇನ್ನುಳಿದ 6 ಎಕರೆ 22 ಸೆಂಟ್ಸ ಸ್ವತ್ತು ನನ್ನ ಅಣ್ಣನ ಹೆಂಡತಿ 5 ನೇ ಆರೋಪಿಯ ಹೆಸರಿನಲ್ಲಿರುತ್ತದೆ. ನನಗೆ 5 ನೇ ಆರೋಪಿತಳ ಹೆಸರಿನಲ್ಲಿ ಮ್ಯುಟೇಶನ್ ಬದಲಾವಣೆಯಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನಾನು 6 ಎಕರೆ 22 ಸೆಂಟ್ಸ ಸ್ವತ್ತು ನನ್ನ ಅಣ್ಣನಾದ 1 ನೇ ಆರೋಪಿತನ ಹೆಸರಿಗೆ ಮಾಡಿಕೊಡುವಂತೆ ಮ್ಯುಟೇಶನ್ ಅರ್ಜಿಗೆ ಸಹಿ ಮಾಡಿರುವುದಿಲ್ಲ. 5 ಎಕರೆ 72 ಸೆಂಟ್ಸ ಸ್ವತ್ತಿನಲ್ಲಿ 2 ಎಕರೆ 71 ಸೆಂಟ್ಸ ಸ್ವತ್ತು ನಾನು ಉಳುಮೆ ಮಾಡುತ್ತಿದ್ದು ಉಳಿದ ಸ್ವತ್ತು ಬೀಳು ಬಿದ್ದಿರುತ್ತದೆ. 2016 ನೇ ಸಾಲಿನಲ್ಲಿ ನನ್ನ ಹಾಗೂ 1 ನೇ ಆರೋಪಿಯ ನಡುವೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪಾಲುವಿಭಾಗವಾಗಿರುತ್ತದೆ, ಸದರಿ ಪಾಲುವಿಭಾಗದಂತೆ 1 ನೇ ಆರೋಪಿತನ ಜಮೀನನ್ನು ಆತನು ಹಾಗೂ ನನಗೆ ಬಂದಂತಹ ಜಮೀನನ್ನು ನಾನು ಉಳುಮೆ ಮಾಡುತ್ತಿರುತ್ತೇನೆಂದರೆ ಸರಿ. 2 ಎಕರೆ 71 ಸೆಂಟ್ಸ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿರುತ್ತದೆಂದರೆ ಸರಿ. ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಡುವಂತೆ 1 ನೇ ಆರೋಪಿಯು ಹಲವಾರು ಬಾರಿ ಹೇಳಿದರೆಂದರೆ ಸರಿಯಲ್ಲ. ಸದರಿ ಜಮೀನನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಲು ಖರ್ಚು ವೆಚ್ಚ ತಗಲುತ್ತದೆಂದು ನಾನು ಈವರೆವಿಗೂ ಸದರಿ ಜಮೀನನ್ನು ತಂದೆಯ ಹೆಸರಿನಲ್ಲಿ ಬಿಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಜಮೀನನ್ನು ಮ್ಯುಟೇಶನ್ ವರ್ಗವಣೆ ಮಾಡಿಕೊಳ್ಳಲು ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲವೆಂದರೆ ಸರಿ. ರಾಜೀಯ ಸಂಬಂಧ ಸದರಿ ಸ್ವತ್ತಿನ ಬಗ್ಗೆ ನನ್ನ ಹೆಂಡತಿ ಹಾಗೂ ಆರೋಪಿತರ ನಡುವೆ ಮಾತುಕತೆಯಾಗಿರುವ ಸಂಬಂಧ ನನಗೆ ಗೊತ್ತಿರುವುದಿಲ್ಲ.

ಸದರಿ ಜಮೀನನ್ನು ಇವತ್ತಿಗೂ 6 ನೇ ಆರೋಪಿಯು ಉಳುಮೆ ಮಾಡುತ್ತಾರೆಂದರೆ ಸರಿ. ಸದರಿ ಜಮೀನಿನಲ್ಲಿ ಗಲಾಟೆಯಾಗಿದೆ ಎಂದು ಹೇಳಿದ ದಿನ 6 ನೇ ಆರೋಪಿಯು ನೇಪಿಯಾರ್ ಸೊಪ್ಪೆಯನ್ನು ಬೆಳೆದಿದ್ದರು ಎಂದರೆ ಸರಿ. ನನ್ನ ಹೆಸರಿಗೆ ಭೂಮಿಯನ್ನು ಮಾಡಿಸಿಕೊಳ್ಳುವ ಸಂಬಂಧ ಜಗಳವಾಗಿರುತ್ತದೆಂದರೆ ಸರಿಯಲ್ಲ ಜಗಳವಾದ ನಂತರ 6 ನೇ ಆರೋಪಿತನು ನನ್ನ ಹೆಸರಿಗೆ ಸದರಿ ಸ್ವತ್ತಿನ ಮ್ಯುಟೇಶನ್ ಮಾಡಿಕೊಟ್ಟಿರುತ್ತಾರೆಂದರೆ ಸರಿ. 6 ನೇ ಆರೋಪಿಗೂ ಹಾಗೂ ನಮ್ಮ ನಡುವೆ ಜಗಳವಾಗಿತ್ತು ಎಂದರೆ ಸರಿಯಲ್ಲ. 6 ನೇ

ಆರೋಪಿಯು ನನ್ನ ಹೆಸರಿಗೆ ಜಮೀನನ್ನು ಮಾಡಿಕೊಟ್ಟ ಕಾರಣ ನನ್ನ ಹಾಗೂ ಆತನ ನಡುವೆ ಯಾವುದೇ ಜಗಳವಾಗಿರುವುದಿಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಜಗಳವಾದಾಗ ನನ್ನ ಹೆಂಡತಿ ಚಾಸಾ-1 ಮನೆಯ ಮುಂದಿನ ಬಾಗಿಲಲ್ಲಿದ್ದರು. 1 ನೇ ಆರೋಪಿ ಮೊದಲು ಅವಾಚ್ಯ ಶಬ್ದಗಳಿಂದ ಬೈದರು. ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

2 ನೇ ಆರೋಪಿಯು ಮೊದಲು ನನ್ನ ಮಗ ಚಾಸಾ-5 ರವರಿಗೆ ಹೊಡೆದರು. 2 ನೇ ಆರೋಪಿ ಸದರಿ ಗಲಾಟೆಯಾದ ದಿನ ಘಟನಾ ಸ್ಥಳಕ್ಕೆ ಬಂದಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ಹೆಂಡತಿಯ ಕೊರಳಿನಲ್ಲಿ ಒಟ್ಟು 2 ತೊಲೆ ಬಂಗಾರ ಇತ್ತು. 5 ನೇ ಆರೋಪಿತಳು ಚಾಸಾ-1 ರವರ ತಾಳಿ ಸರ ಹರಿದಿರುವುದಿಲ್ಲವೆಂದರೆ ಸರಿಯಲ್ಲ ನಾನು ಈ ಬಗ್ಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮು ಮಾ-1 ರಂತಹ ಮುದ್ದೆಮಾಲುಗಳು ಊರಿನಲ್ಲಿ ಸಾಕಷುಟ ಸಿಗುತ್ತವೆಂದರೆ ಸರಿ. ಮು ಮಾ-1ರ ಮುದ್ದೆಮಾಲು ನಮ್ಮ ಮನೆಯ ಕಟ್ಟಿಗೆ ಎಂದರೆ ಸರಿ. ಸದರಿ ಕಟ್ಟಿಗೆ ನಮ್ಮ ಮನೆಯಲ್ಲಿದ್ದು ಆರೋಪಿತರು ಹೊಡೆಯದಿದ್ದರೂ ಹೊಡೆದಿರುವುದಾಗಿ ಕಟ್ಟಿಗೆಯನ್ನು ತೋರಿಸಲಾಗಿತ್ತು ಎಂದರೆ ಸರಿಯಲ್ಲ. ನನ್ನ ಹಾಗೂ 1 ನೇ ಆರೋಪಿ ನನ್ನ ಅಣ್ಣನ ನಡುವೆ ಪಾಲುವಿಭಾಗವಾಗಿದ್ದು ಅವರು ಚೆನ್ನಾಗಿರುವ ಕಾರಣ ಅವರಿಗೆ ಕಿರುಕುಳ ಕೊಡುವ ಸಂಬಂಧ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲುಪಡಿಸಿರುತ್ತೇನೆಂದರೆ ಸರಿಯಲ್ಲ.

ಪಾಟೀ ಸವಾಲು. 6 ನೇ ಆರೋಪಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-

ಜಗಳವಾದಾಗ 6 ನೇ ಆರೋಪಿ ಘಟನಾ ಸ್ಥಳದಲ್ಲಿ ಇರಲಿಲ್ಲವೆಂದರೆ ಸರಿ. ನಾನು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ 6 ನೇ ಆರೋಪಿತನ ವಿರುದ್ಧ ಯಾವುದೇ ಹೇಳಿಕೆಯನ್ನು

ಕೊಟ್ಟಿರುವುದಿಲ್ಲವೆಂದರೆ ಸರಿ. 6 ನೇ ಆರೋಪಿತನಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲವೆಂದರೆ ಸರಿ. .

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ